

ಬ್ರಹ್ಮ ದೇವಾಲಯಗಳಲ್ಲಿ ಇದು ಮುಖ್ಯವಾದುದು. ಇಲ್ಲಿರುವ ಪುಷ್ಕರ್ ಸರೋವರವು ಮತ್ತೊಂದು ಧಾರ್ಮಿಕ ಆಕರ್ಷಣೆ.

## ಅರ್ಧಗೋಳಾಕೃತಿಯ 'ತೀರ್ಥರಾಜ'

ಬ್ರಹ್ಮದೇವರಿಂದ ನಿರ್ಮಾಣಗೊಂಡಿದೆ ಎನ್ನುವ ಕಥೆ ಪುಷ್ಕರ್ ಸರೋವರದ ಜೊತೆಗೆ ತಳಕು ಹಾಕಿಕೊಂಡಿದೆ. ಅರ್ಧಗೋಳಾಕೃತಿಯನ್ನು ಹೊಂದಿರುವ ಈ ಸರೋವರಕ್ಕೆ 'ತೀರ್ಥರಾಜ' ಎಂತಲೂ ಕರೆಯಲಾಗುತ್ತದೆ.

10 ಮೀ. ಆಳವಿರುವ ಈ ಸರೋವರವು ತನ್ನ ಸುತ್ತಲೂ 300ಕ್ಕೂ ಅಧಿಕ ದೇವಸ್ಥಾನಗಳನ್ನು ಹೊಂದಿದೆ. ಹಿಂದೆ ಪುರಾಣ ಕಾಲದಲ್ಲಿ ಬ್ರಹ್ಮದೇವನು ಕಮಲದ ಹೂವಿನಿಂದ ವಜ್ರನಾಭನೆಂಬ ರಾಕ್ಷಸನನ್ನು ಸಂಹಾರ ಮಾಡಿದನಂತೆ. ಆಗ ಕಮಲದ ಹೂವಿನ ಮೂರು ಪಕಳೆಗಳು ಕೆಳಗೆ ಬಿದ್ದು, ಮೂರು ಸರೋವರಗಳು ಉದ್ಭವವಾದವು. ಜೇಷ್ಠ ಪುಷ್ಕರ್, ಮಧ್ಯಮ ಪುಷ್ಕರ್ ಹಾಗೂ ಕನಿಷ್ಠ ಪುಷ್ಕರ್ – ಹೀಗೆ ಮೂರು ಸರೋವರಗಳಿರುವ ಈ ಪ್ರಾಂತಕ್ಕೆ ಪುಷ್ಕರ ಎಂದು ಬ್ರಹ್ಮದೇವರೇ ನಾಮಕರಣಮಾಡಿದರು ಎಂದು 'ಪದ್ಮ ಪುರಾಣ'ದಲ್ಲಿ ಉಲ್ಲೇಖಿಸಲಾಗಿದೆ.

ಇದೇ ಪವಿತ್ರ ಸ್ಥಳದಲ್ಲಿ ಮುಖ್ಯ ಸರೋವರದ ಪಕ್ಕದಲ್ಲಿ ಮಹಾಯಜ್ಞ ಮಾಡಲು ಬ್ರಹ್ಮದೇವ ನಿಶ್ಚಯಿಸಿದರಂತೆ. ಯಜ್ಞಕ್ಕೆ ಯಾವ ರಾಕ್ಷಸರಿಂದಲೂ ತೊಂದರೆಯಾಗಬಾರದು ಎಂಬ ಕಾರಣಕ್ಕಾಗಿ ಪುಷ್ಕರ್ ಸುತ್ತಮುತ್ತಲೂ ನಾಲ್ಕೂ ದಿಕ್ಕಿಗೆ ನಾಲ್ಕು ಪರ್ವತಗಳನ್ನು ನಿರ್ಮಿಸಿದರಂತೆ. ಪೂರ್ವಕ್ಕೆ ಸೂರ್ಯಗಿರಿ, ಪಶ್ಚಿಮಕ್ಕೆ ಸಂತೂಗಿರಿ, ದಕ್ಷಿಣಕ್ಕೆ ರತ್ನಗಿರಿ, ಉತ್ತರಕ್ಕೆ ನೀಲಗಿರಿ ಪರ್ವತ. ಆಗ ಯಜ್ಞ ಸಮಯದಲ್ಲಿ ಅವರ ಪತ್ನಿ ಸಾವಿತ್ರಿ ಅಲ್ಲಿರಲಿಲ್ಲ. ಆಗ ಯಜ್ಞವನ್ನು ಸಂಪೂರ್ಣಗೊಳಿಸುವ ನಿಟ್ಟಿನಲ್ಲಿ ಬ್ರಹ್ಮದೇವ ಅಲ್ಲಿಯೇ ಇರುವ ಹಾಲು ಮಾರುವವಳಾದ ಗಾಯತ್ರಿಯನ್ನು ವರಿಸಿ ಯಜ್ಞವನ್ನು ಸಂಪೂರ್ಣಗೊಳಿಸಿದನು. ಇದರಿಂದ ಬೇಸರಗೊಂಡ ಸಾವಿತ್ರಿ, ಪುಷ್ಕರ್ ಹೊರತಾಗಿ ಬೇರೆಲ್ಲೂ ಬ್ರಹ್ಮದೇವನನ್ನು ಪೂಜಿಸಬಾರದು ಎಂದು ಶಾಪ ನೀಡಿದಳೆಂಬ ಪ್ರತೀತಿ ಇದೆ.

## ಅಡಿಗಡಿಗೆ ಮಂದಿರ

ಮೂಲತಃ 14ನೇ ಶತಮಾನದಲ್ಲಿ ಪುಷ್ಕರ್‌ನ ಪ್ರಮುಖ ಸರೋವರದ ತಟದಲ್ಲಿ ನಿರ್ಮಾಣವಾದ ಈ ಬ್ರಹ್ಮ ದೇವಾಲಯವು 2000 ವರ್ಷಗಳ ಇತಿಹಾಸ ಹೊಂದಿದೆ. ಸಂಪೂರ್ಣವಾಗಿ ಅಮೃತಶಿಲೆಯಲ್ಲಿ ನಿರ್ಮಾಣವಾಗಿರುವುದು ಮಂದಿರದ ವಿಶೇಷ. ಸುಂದರವಾಗಿ ಕೆತ್ತನೆ ಮಾಡಿದ ನವರಂಗದಲ್ಲಿರುವ ಸುಂದರವಾದ ಕಂಬಗಳು ಭಾವಣೆಯನ್ನು ಎತ್ತಿ ಹಿಡಿದಿವೆ.

700 ಅಡಿ ಎತ್ತರದ ಕೆಂಪುವರ್ಣದ ಗೋಪುರ ಅತ್ಯಂತ ಆಕರ್ಷಕವಾಗಿದೆ. ಗರ್ಭಗೃಹದಲ್ಲಿ ಬ್ರಹ್ಮ ಚತುರ್ಮುಖವಾಗಿ ನೆಲೆಸಿದ್ದಾನೆ. ಎಡ ಭಾಗದಲ್ಲಿ ಗಾಯತ್ರಿಯ ಕುಳಿತಿರುವ ಭಂಗಿಯನ್ನು ನಾವು ಕಾಣಬಹುದು. ಪ್ರತಿ ವರ್ಷ ಕಾರ್ತೀಕ ಪೂರ್ಣಮೆಯ ದಿನ ಲಕ್ಷಾಂತರ ಭಕ್ತರು ಈ ಸರೋವರದಲ್ಲಿ ಮಿಂದು ಪುನೀತರಾಗುತ್ತಾರೆ. ಇಲ್ಲಿ ಸ್ನಾನ ಮಾಡಿದರೆ ಮೋಕ್ಷಕ್ಕೆ ದಾರಿ ಎನ್ನುವುದು ಭಕ್ತರ ಗಾಢವಾದ ನಂಬಿಕೆ. ಪವಿತ್ರ ತೀರ್ಥದಿಂದ ಎಂತಹ ಚರ್ಮರೋಗವಿದ್ದರೂ ವಾಸಿಯಾಗುವುದು ಎಂಬ ನಂಬಿಕೆಯೂ ಇದೆ.

ಪುಷ್ಕರ್‌ನಲ್ಲಿರುವ ಇನ್ನಿತರ ಪ್ರಮುಖ ದೇವಸ್ಥಾನಗಳೆಂದರೆ – 10ನೇ ಶತಮಾನದಲ್ಲಿ ನಿರ್ಮಾಣವಾದ ಆಪ್ತೇಶ್ವರ ದೇವಸ್ಥಾನ, 12ನೇ ಶತಮಾನದಲ್ಲಿ ನಿರ್ಮಾಣವಾದ ವರಾಹ ದೇವಸ್ಥಾನ ಮತ್ತು ವಿಷ್ಣುವಿನ ಇನ್ನೊಂದು ರೂಪವಾದ ರಂಗ್‌ಜಿ ದೇವಸ್ಥಾನ. ದ್ರಾವಿಡನ್ ಮಾದರಿಯ ವಾಸ್ತುಶಿಲ್ಪ ಹೊಂದಿರುವ ರಂಗ್‌ಜಿ ಮಂದಿರ ಆಕರ್ಷಕವಾದ ಗೋಪುರವನ್ನು ಹೊಂದಿದೆ. ಇಲ್ಲಿರುವ ರಾಮವೈಕುಂಠ ದೇವಸ್ಥಾನ ವಿವಿಧ ದೇವತೆಗಳ 361 ವಿಗ್ರಹಗಳನ್ನು ಹೊಂದಿದೆ. ಈ ದೇವಸ್ಥಾನವನ್ನು ಬ್ರಹ್ಮದೇವರ ಪತ್ನಿಯಾದ